ಅ) ಹಾಗಾದರೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).

ಅ) ಹೌದು.

ಆ) ಅಂತಹ ಉಪಯೋಗಗಳಿಗೆ ಮಾತ್ರ ಜಮೀನನ್ನು ಮೀಸಲಾಗಿಡುವಂತೆ ನಿರ್ದಿಷ್ಟವಾದ ಸೂಚನೆಗಳನ್ನು ನೀಡಲಾಗಿದೆ.

ಗಂಗಾವತಿ ತಾಲ್ಲೂಕಿನ ಕಾರಟಗಿಗೆ ಪೋಲೀಸ್ ಸ್ಟೇಷನ್

೮೧೬ (೧೬೫೬) ಶ್ರೀ ಎಂ. ಮಲ್ಲಿಕಾರ್ಜುನ (ಕನಕಗಿರಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ:—

ಗಂಗಾವತಿ ತಾಲ್ಲೂಕಿನ ಕಾರಟಗಿಗ್ರಾಮದಲ್ಲಿ ಸದ್ಯ ಔಟ್ ಡೋರ್ ಪೋಲೀಸ್ ಸ್ಟೇಷನ್ ಇದ್ದು, ಶೀಘ್ರವಾಗಿ ಪೂರ್ಣ ಠಾಣೆ ಮಂಜೂರು ಮಾಡಿ, ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ಸಿಬ್ಬಂದಿ ವರ್ಗವನ್ನು ಪೂರ್ಣ ಪ್ರಮಾಣದಲ್ಲಿ ನೇಮಕ ಮಾಡಲಾಗುವುದೇ ?

ಶ್ರೀ ವಿರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಇಲ್ಲ.

ತುರುವೇಕೆರೆ ತಾಲ್ಲೂಕಿನಲ್ಲಿ ಗೊತ್ತು ಪಡಿಸಿದ ಟಿ. ಟಿ. ಯ ವಿಚಾರ

೮೧೮ (೧೬೪೫) ಶ್ರೀ ಎಸ್. ರುದ್ರಪ್ಪ, (ತುರುವೇಕೆರೆ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ೧೯೮೮–೮೯ನೇ ಸಾಲಿನಲ್ಲಿ ತುರುವೇಕೆರೆ ತಾಲ್ಲೂಕಿನಲ್ಲಿ ಕಂದಾಯ ಇಲಾಖೆಯು ಗೊತ್ತುಪಡಿಸಿದ ಒಟ್ಟು ಟಿ. ಟಿ. ಯ ಮೊತ್ತವೆಷ್ಟು. ಈ ಪೈಕಿ ವಸೂಲಾಗಿರುವ ಹಣವೆಷ್ಟು. ಅದೇ ರೀತಿ ೧೯೮೦–೮೧ನೇ ಸಾಲಿಗೆ ಇಲಾಖೆಯು ಈ ತಾಲ್ಲೂಕಿನಾದ್ಯಂತ ಗೊತ್ತು ಪಡಿಸಿರುವ ಟಿ. ಟಿ ಯ ಮೊತ್ತದ ಪ್ರಮಾಣವೆಷ್ಟು ?

ಆ) ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕ್ ದಂಡಿನ ಶಿವರ ಹೋಬಳಿಯ ನಾಡ ಕಛೇರಿಯವರು ಒಬ್ಬ ವ್ಯಕ್ತಿಗೆ (ನರಸಪ್ಪ ಬಿನ್ ರಂಜಂಡಪ್ಪ ಡಿ. ಹೊಸಹಳ್ಳಿ) ೧೯೮೮–೮೯ ಹಾಗೂ ೧೯೮೯–೯೦ರಲ್ಲಿ ಎರಡು ರೀತಿಯ ಟಿ. ಟಿ. ಬಾಬ್ತು ವಿಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು ?

ಈ) ಇದರಿಂದಾಗಿ ರೈತರಿಗೆ ಅನಾನುಕೂಲವಾಗುವುದರಿಂದ, ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

ಶ್ರೀ ಕೆ. ಎಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ೧೯೮೮–೮೯ನೇ ಸಾಲಿನಲ್ಲಿ ಕಂದಾಯ ಇಲಾಖೆಯು ಗೊತ್ತುಪಡಿಸಿದ ಒಟ್ಟು ಟಿ. ಟಿ. ಯ ಮೊತ್ತ ರೂ. ೧೫,೧೯,೬೮೦–೦೦. ಈ ಪೈಕಿ ಪೂರ್ತಿ ಹಣ ವಸೂಲಾಗಿರುತ್ತದೆ. ೧೯೮೯–೯೦ನೇ ಸಾಲಿಗೆ ಇಲಾಖೆಯು ಈ ತಾಲ್ಲೂಕಿನಾದ್ಯಂತ ಗೊತ್ತು ಮಾಡಿರುವ ಟಿ. ಟಿ ಯ ಮೊತ್ತ ರೂ. ೮,೬೫,೫೯೪–೦೦

ಆ) ಹೌದು.

ಇ) ೧೯೮೮–೮೯ನೇ ಸಾಲಿಗೆ ನಾಡ ಅಧಿಕಾರಿಗಳು ಎಕರೆ ಒಂದಕ್ಕೆ ೧೦೦ ರೂ. ಟಿ. ಟಿ. ವಿಧಿಸಿ ಜಮೀನು ಖುಲ್ಲಾ ಪಡಿಸುವಂತೆ ತಿಳುವಳಿಕೆ ನೀಡಿದ್ದು ಖುಲ್ಲಾ ಮಾಡಲು ಒತ್ತುವರಿದಾರರು ಒಪ್ಪಿದ್ದರು, ಪುನಃ ೧೯೮೯–೯೦ರ ಸಾಲಿನಲ್ಲಿ ಖುಲ್ಲಾ ಮಾಡಿದ ಅಪ್ಪರ್ ಸಾಗುವಳಿಯನ್ನು ಮುಂದುವರೆಸಿದ್ದುದರಿಂದ ಎಕರೆ ಒಂದಕ್ಕೆ ೩೫೦ ರೂ. ಗಳನ್ನು ವಿಧಿಸಲಾಗಿದೆ.